ದಿನಾಂಕಃ **25.07.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ರಿಂದ **4** ನೇ ಪ್ರತಿವಾದಿಗಳ ಪರ ಶ್ರೀ ಜಿ ಇ ಎನ್ ವಕೀಲರಿಂದಃ-

ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ದಾವಾ ಆಸ್ತಿಯು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ. ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನು ಮತ್ತು ನನ್ನ ತಂದೆ ಮಾಹಿತಿ ನೀಡಿರುತ್ತೇವೆ. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ವಿದ್ಯಾಬ್ಯಾಸ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂದೆ ಏನು ವ್ಯವಹಾರ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸಖರಾಯಪಟ್ಟಣ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನನಗೆ ಎಷ್ಟು ಮನೆ ಮತ್ತು ಎಷ್ಟು ನಿವೇಶನ ಇರುತ್ತದೆ ಎಂದರೆ ಸಾಕ್ಷಿಯು ಒಂದು ನಿವೇಶನ ಮತ್ತು ಒಂದು ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸುವಾಗ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿ. ನನ್ನ ಅಜ್ಜ ಅಜ್ಜಿಯ ಹೆಸರು ಬೋರಣ್ಣ ಮತ್ತು ಶಾಂತಮ್ಮ ಎಂದರೆ ಸರಿ. ಅವರಿಗೆ ನನ್ನ ತಂದೆ ಒಬ್ಬನೇ ಮಗ. ನನ್ನ ತಂದೆ ಎರಡು ಮದುವೆಯಾಗಿರುತ್ತಾರೆ ಎಂದರೆ ಸರಿ. ನಾನು ಮೊದಲನೇ ಹೆಂಡತಿ ಮಗ. ನನ್ನ ತಂದೆಯ ಮೊದಲನೇ ಹೆಂಡತಿಗೆ ಇಬ್ಬರು ಗಂಡು ಮಕ್ಕಳು, 2 ನೇ ಹೆಂಡತಿಗೆ ಒಬ್ಬಳು ಮಗಳು ಇರುತ್ತಾಳೆ. ಪ್ರತಿವಾದಿಯ ತಂದೆ ಚೌಡಪ್ಪ ರವರನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಮೂಲ ದಾಖಲೆಗಳನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯ ಸದರಿ ದಾಖಲೆಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ 2 ಎಕರೆ ಜಮೀನು ಇರುತ್ತದೆ. ದಾವಾ ಆಸ್ತಿಯಲ್ಲಿ ಎಷ್ಟು ವರ್ಷಗಳಿಂದ ನೀವು ವಾಸವಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಅಲ್ಲೇ ವಾಸವಾಗಿದ್ದೆ ಇತ್ತೀಚೆಗೆ ಒಂದು ವರ್ಷದಿಂದ ಖಾಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ತಂದೆ ಯಾವ ಆಸ್ತಿಯನ್ನು ಖರೀದಿಸಿರುತ್ತಾರೆ ಮತ್ತು ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುವುದಿಲ್ಲ.

**(** ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು **)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.